**ಸಾಕ್ಷಿಯನ್ನು ಈ ದಿನ ದಿಃ 24.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ದಿಃ 24.01.2024 ರ ಆದೇಶದಂತೆ ಸಾಕ್ಷಿಯ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜ್ಯೋತಿ ವಕೀಲರಿಂದಃ (ಎಲ್ ಎ ಡಿ ಸಿ )**

1. ನನ್ನ ಊರು ಭೈರಾಪುರ ಟಿ.ನರಸೀಪುರದಿಂದ ನನ್ನ ಊರಿಗೆ ಒಂದೂವರೆ ಕಿ.ಮಿ. ದೂರವಾಗಬಹುದು. ನಾನು ಕೂಲಿ ಕೆಲಸ ಮಾಡುತ್ತೇನೆ. ಗದ್ದೆ ಕೆಲಸಕ್ಕೆ ಹೋಗುತ್ತೇನೆ ಮತ್ತು ಚಾಲಕನಾಗಿಯೂ ಕೆಲಸ ಮಾಡುತ್ತೇನೆ. ಊರಿನಲ್ಲಿ ವೆಂಕಟೇಶ ಮತ್ತು ನಾಗಮ್ಮ ಎನ್ನುವವರ ನಡುವೆ ನೀರಿನ ವಿಷಯವಾಗಿ ಜಗಳವಾಗಿತ್ತು. ಆ ಸಂಬಂಧ ದೂರನ್ನು ನೀಡುವ ಸಲುವಾಗಿ ಠಾಣೆ ಹೋಗಿದ್ದೆ. ಅಲ್ಲಿ ರಾಜಿ ಮಾಡಿಸಿದೆವು. ಆಗಾಗ ನನನ್ನು ಪೋಲೀಸರು ಮಹಜರ್ ಗಾಗಿ ಕರೆದು ಸಹಿ ಪಡೆಯುತ್ತಾರೆ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮ ಪೋಲೀಸರು ಮಹಜರ್ ಮಾಡಿರುವುದಿಲ್ಲ ಮತ್ತು ಯಾವುದೇ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ. ಬಟ್ಟೆ ಠಾಣೆಯಲ್ಲಿ ನೆಲದ ಮೇಲೆ ಇದ್ದವು ಅವುಗಳನ್ನು ಅಮಾನತ್ತು ಪಡಿಸಿಕೊಂಡರು. ಅಮಾನತ್ತು ಮಹಜರ್ ನಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**

**ಮೈಸೂರು.**